# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 49/2021**

| | | |
|---|---|---|
| ಸಾಕ್ಷಿದಾರರ ಹೆಸರು | ರವಿ ಸಿ.ವಿ | ಪ್ರಮಾಣ ವಚನ ಮಾಡಿದ ದಿನಾಂಕ: 15.12.2025 |
| ತಂದೆಯ/ಗಂಡನ ಹೆಸರು | ವೆಂಕಟೇಶ್ | |
| ವಯಸ್ಸು | 48 ವರ್ಷ | |
| ವೃತ್ತಿ | DYSP, CID ಘಟಕ ಬೆಂಗಳೂರು | ಪ್ರಾ.ಸಾಃ 4 |
| ವಾಸ ಸ್ಥಳ | ಬೆಂಗಳೂರು | ಚಾ.ಸಾಃ 15 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ವಿಜಯನಗರ ಪೊಲೀಸ್ ಠಾಣೆಯಲ್ಲಿ *29.09.2013* ರಿಂದ *08.05.2015* ರವರೆಗೆ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನು.

ದಿನಾಂಕ *09.03.2014* ರಂದು ರಾತ್ರಿ *7.30* ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿ ಇದ್ದಾಗ ಚಾಸಾ-*17* ಪುನೀತ್ ಬಿ.ಎನಿ. ರವರು ಅಪೊಲೋ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿದ್ದ ಚಾಸಾ-*1* ಕೇಶವಗೌಡ ರವರು ನೀಡಿದ ಹೇಳಿಕೆ ದೂರನ್ನು ಪಡೆದುಕೊಂಡು ಬಂದು ನನ್ನ ಮುಂದೆ ಹಾಜರುಪಡಿಸಿದ್ದು ಅದನ್ನು ಠಾಣಾ ಮೊ.ಸಂಖ್ಯೆ *94/2014* ಕಲಂ *307* ಸಹಕಲಂ *34* ಐಪಿಸಿ ಪ್ರಕರಣವನ್ನು ದಾಖಲು ಮಾಡಿಕೊಂಡು ಪ್ರ.ವ.ವರದಿ ಮತ್ತು ದೂರನ್ನು ನ್ಯಾಯಾಲಯಕ್ಕೆ ಮತ್ತು ಸದರಿ ಪ್ರತಿಗಳನ್ನು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೇನು.

ಸಾಕ್ಷಿದಾರರು ಹೇಳಿಕೆ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-*6* ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-*6(ಎ)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು ನಿಪಿ-*7* ಎಂದು ಸಾಕ್ಷಿದಾರ ಸಹಿಯನ್ನು ನಿಪಿ-*7(ಎ)* ಎಂದು ಗುರುತಿಸಲಾಯಿತು.

ನಾನು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-*17* ರವರಿಗೆ ಕಡತದೊಂದಿಗೆ ಹಸ್ತಾಂತರಿಸಿದ್ದೆನು.

ಪುನಃ ದಿನಾಂಕ *24.03.2014* ರಂದು ಪ್ರಕರಣದಲ್ಲಿ ಆರೋಪಿತರಾದಂತಹ ಪುನೀತ್, ವಿಷ್ಣು ಮತ್ತು ವಿನೋದ್ ರವರನ್ನು ಠಾಣಾ ಮೊ.ಸಂಖ್ಯೆ *111/2014* ರಲ್ಲಿ ದಿನಾಂಕ *23.03.2014* ರಂದು ವಶಕ್ಕೆ ಪಡೆದುಕೊಂಡಿದ್ದವರನ್ನು ಈ ಪ್ರಕರಣದಲ್ಲಿ ಚಾಸಾ-*1* ರವರನ್ನು ದಿನಾಂಕ *24.03.2014* ರನ್ನು ಠಾಣೆಗೆ ಬರಮಾಡಿಕೊಂಡು ಆರೋಪಿತರನ್ನು ತೋರಿಸಿದ್ದು ಅವರು ಸದರಿ ಆರೋಪಿತರನ್ನು ನೋಡಿ ಗುರುತಿಸಿದ್ದರು. ನಾನು ಆ ವೇಳೆಯಲ್ಲಿ ಚಾಸಾ-*1* ರವರು ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿದ್ದೆನು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ** :

ಠಾಣಾ ಮೊ.ಸಂಖ್ಯೆ 111/2014 ರಲ್ಲಿ ದಸ್ತಗಿರಿ ಮಾಡಿದ ಆರೋಪಿತರ ಪೈಕಿ 3 ಜನ ಆರೋಪಿತರು ಈ ಪ್ರಕರಣದಲ್ಲಿ ಭಾಗಿಯಾಗಿರುತ್ತಾರೆ ಎಂದು ಗೊತ್ತಾದ ಮೇಲೆ ಪಿರ್ಯಾದುದಾರರಿಗೆ ತೋರಿಸಿ ಆರೋಪಿತರನ್ನು ಗುರುತಿಸಿದ ಬಗ್ಗೆ ಮುಂದುವರೆದ

ಹೇಳಿಕೆ ಪಡೆದುಕೊಂಡಿದ್ದೆನು. ನಾನು ಈ ಪ್ರಕರಣದಲ್ಲಿ ಯಾವುದೇ ಆರೋಪಿತರನ್ನು ಪಿರ್ಯಾದುದಾರರಿಗೆ ತೋರಿಸಿ ಮುಂದುವರೆದ ಹೇಳಿಕೆ ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ಹೇಳಿಕೆ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರು ಈ ಪ್ರಕರಣದಲ್ಲಿ ಹೇಳಿಕೆ ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಪಿರ್ಯಾದುದಾರರ ಯಾವುದೇ ಮುಂದುವರೆದ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.**